**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 06-03-2026)**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಸ್.ವಿ.ಎ. ವಕೀಲರಿಂದ,**

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಕಲ್ಲು ತೆಗೆಯುತ್ತಿರುವ ಜಾಗದ ಸರ್ವೆ ನಂಬರ್ 207/2 ಆಗಿರುತ್ತದೆ. ಷದ್ರಿ ಸರ್ವೆ ನಂಬರ್ ನಲ್ಲಿ ಕ್ಷೇತ್ರ 5 ಎಕರೆ 24 ಗುಂಟಾ ಆಗಿರುತ್ತದೆ. ಅಷ್ಟು ಜಾಗ ಇದೆ ಎಂದು ತೋರಿಸಲು ಈ ಪ್ರಕರಣದಲ್ಲಿ ದಾಖಲೆ ಹಾಜರುಪಡಿಸಿರುತ್ತೇನೆ. ಈ ಮೇಲೆ ಹೇಳಿದ ಸರ್ವೆ ನಂಬರ್ ನಲ್ಲಿ 1 ಎಕರೆ 10 ಗುಂಟಾ ಜಾಗ ಖರಾಬ ಜಾಗ ಇರುತ್ತದೆ. ಅಷ್ಟು ಖರಾಬು ಜಾಗ ಇದೆ ಎಂದು ತೋರಿಸಲು ಈ ಪ್ರಕರಣದಲ್ಲಿ ದಾಖಲೆ ಹಾಜರುಪಡಿಸಿರುವುದಿಲ್ಲ. ನನ್ನ ಮನೆ ಭಟ್ಕಳದ ಸುಲ್ತಾನ್ ಸ್ಟ್ರೀಟ್ ನಲ್ಲಿರುತ್ತದೆ. ದಾವಾ ಸ್ವತ್ತು ಭಟ್ಕಳದ ಮುಂಡಳ್ಳಿಯ ಗುಡ್ಡದಲ್ಲಿರುತ್ತದೆ. ನಮ್ಮ ಮನೆಯಿಂದ ದಾವಾ ಸ್ವತ್ತಿಗೆ 4-5ಕಿ.ಮಿ ದೂರ ಇರುತ್ತದೆ. ದಾವಾ ಸ್ವತ್ತು ಎದುರುದಾರರು (6ನೇ ಪ್ರತಿವಾದಿಯ) ರ ಹೆಸರಿನಲ್ಲಿರುತ್ತದೆ ಎಂದರೆ ಹೌದು. ಆ ರೀತಿ 2012-13ನೇ ಇಸವಿಯಲ್ಲಿ ಎದುರುದಾರರು (6ನೇ ಪ್ರತಿವಾದಿಯ) ರು ಖರೀದಿ ಮಾಡಿರುತ್ತಾರೆ. ಆ ರೀತಿ ಖರೀದ ಮಾಡಿದ ನಂತರ ದಾವಾ ಆಸ್ತಿಯ ದಾಖಲಾತಿಗಳು ಎದುರುದಾರರು (6ನೇ ಪ್ರತಿವಾದಿಯ) ರ ಹೆಸರಿಗೆ ಆಗಿರುತ್ತದೆ ಎಂದರೆ ಹೌದು.

**ಈ ಹಂತದಲ್ಲಿ ಎದುರುದಾರರ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**